**Code No. 08 X(C)**

# ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು – ಪ್ರೌಢ ದರ್ಜೆ – ಪ್ರಥಮ ಪತ್ರಿಕೆ

ಜುಲೈ, 2015

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಭಾರತೀಯ ಶೈಲಿಯ ಕುಸ್ತಿಗೆ, ಪ್ರಪಂಚದಲ್ಲಿ ತನ್ನದೇ ಆದ ವಿಶಿಷ್ಟವಾದ ಸ್ಥಾನ ಮತ್ತು ಹೆಸರು ಪಡೆದಿದೆ. ಇತಿಹಾಸದ ಕಾವ್ಯ ಪುರಾಣದಲ್ಲಿ ಮಲ್ಲ ಯುದ್ಧ ಮತ್ತು ಕುಸ್ತಿಯ ವಿವರವಾದ ವರ್ಣನೆಯು ದೊರೆಯುತ್ತದೆ. ಇದು ಒಂದು ಪರಿಪೂರ್ಣವಾದ ಕಲೆ ಎಂದು ಸ್ಪಷ್ಟವಾಗಿ ಹೇಳಬಹುದು. ರಾಜರ ಆಶ್ರಯದಲ್ಲಿ ಮಹೋನ್ನತವಾದ ಮನ್ನಣೆಯನ್ನು ಪಡೆದಿದ್ದ ಸಮರ ಕಲೆಗಳಲ್ಲಿ ಮಲ್ಲ ಯುದ್ಧ ಮತ್ತು ವಜ್ರಮುಷ್ಠಿ ಕಾಳಗವಾಗಿದೆ. ಭಾರತದ ಪ್ರಾಚೀನ ಕ್ರೀಡೆಗಳಲ್ಲಿ ಮತ್ತು ಕಲೆಗಳಲ್ಲಿ ಇದು ಕೂಡ ಒಂದಾಗಿದೆ. ಮಲ್ಲ ಯುದ್ಧ, ವಜ್ರಮುಷ್ಠಿ ಕಾಳಗಕ್ಕೆ ರಾಜರುಗಳ ಮನ್ನಣೆ ಇದ್ದ ಕಾರಣ ಕೆಲವೊಂದು ಸಮಯದಲ್ಲಿ ಇದೊಂದು ರಾಷ್ಟ್ರೀಯ ಕ್ರೀಡೆಯಾಗಿ ತನ್ನತನದ ಛಾಪು ಮೂಡಿಸಿತ್ತು. ರಾಜಶ್ವ ರದಾಗಿ ಪ್ರಜಾಪ್ರಭುತ್ವ ಆಡಳಿತದ ತೆಕ್ಕೆಗೆ ಬಿದ್ದ ನಂತರ ಈ ಕಲೆಗೂ ಕುತ್ತಾಯಿತು. ಇದನ್ನು ನಂಬಿದ್ದ ಜನಾಂಗವು ತೀವ್ರವಾದ ಸಂಕಷ್ಟಕ್ಕೆ ಒಳಗಾದರು. ಈ ಕಲೆಯು ಇಂದು ಇತಿಹಾಸದ ಪುಟಗಳನ್ನು ಸೇರಿದ್ದು ಕೇವಲ ಸಂಪ್ರದಾಯವಾಗಿ ಮಾತ್ರ ಉಳಿದು ಬಂದಿರುತ್ತದೆ.

ಗ್ರಾಮೀಣ ಭಾಗದಲ್ಲಿ ಕುಸ್ತಿ ಪಂದ್ಯ, ಕುಸ್ತಿ ತರಬೇತಿಯಿಂದ ಮುಂತಾದವು ಬದುಕಿನ ಅವಿಭಾಜ್ಯ ಅಂಗವಾಗಿದೆ. ಇದೊಂದು ಕೇವಲ ಕ್ರೀಡೆ ಮಾತ್ರ ಆಗಿರಲಿಲ್ಲ, ಮನರಂಜನೆಯಾಗಿ ಮತ್ತು ಸಾಂಸ್ಕೃತಿಕವಾದ ಕ್ರಿಯೆ ಕೂಡ ಆಗಿತ್ತು. ಗ್ರಾಮದಲ್ಲಿ ದೇವಸ್ಥಾನಗಿಂತಲೂ ಗರಡಿ ಮನೆಗಳು ಮತ್ತು ವ್ಯಾಯಾಮ ಶಾಲೆಗಳಿಗೆ ಹೆಚ್ಚು ಮಹತ್ವವನ್ನು ನೀಡುತ್ತಿದ್ದರು. ಗರಡಿ ಮನೆಗಳು ಆ ಊರಿನ ದೇವಸ್ಥಾನದಷ್ಟೇ ಪವಿತ್ರವಾದ ಸ್ಥಾನವನ್ನು

[ Turn over

ಗಳಿಸಿದ್ದವು. ಗರಡಿ ಮನೆಗಳು ತನ್ನ ಸೀಮಿತವಾದ ವ್ಯಾಪ್ತಿಯಲ್ಲಿ ಆ ಗ್ರಾಮದ ಅಥವಾ ಆ ಊರಿನ ಘನತೆಯನ್ನು ಮತ್ತು ಗೌರವವನ್ನು ಹೆಚ್ಚಿಸುವ ಹಾಗೂ ಊರಿಗೆ ಖ್ಯಾತಿ ತಂದುಕೊಡುವ ಕೇಂದ್ರವಾಗಿದ್ದವು. ಕುಸ್ತಿಪಟುಗಳು ಅಸಹಾಯಕರಿಗೆ ನೊಂದವರಿಗೆ ನೆರವಾಗುತ್ತಿದ್ದರು. ಈ ಹಿನ್ನೆಲೆಯಲಿ ಜನಪದದಲ್ಲಿ ಕುಸ್ತಿಗೆ ವಿಶೇಷವಾದ ಸ್ಥಾನವನ್ನು ಕಲ್ಪಿಸಿಕೊಡಲಾಗಿದೆ.

ಮೈಸೂರು ಜಿಲ್ಲೆ ಮತ್ತು ತಮಿಳುನಾಡಿನ ಕೆಲವು ಭಾಗದಲ್ಲಿ ವಿಶೇಷವಾಗಿ ನೆಲೆಸಿರುವ ಜೆಟ್ಟಿ ಜನಾಂಗವು ತನ್ನದಾಗಿ ಮಾಡಿಕೊಂಡಿತ್ತು. ಜಟ್ಟಿ ಎಂದರೆ ದೇವಮಲ್ಲ ಎನ್ನುವಷ್ಟರ ಮಟ್ಟಿಗೆ ಈ ಜನಾಂಗವು ಕುಸ್ತಿ ಮತ್ತು ವಜ್ರಮುಷ್ಟಿ ಕಾಳಗದ ಸಮರ ಕಲೆಗೆ ಇತನ್ನನ್ನು ಅರ್ಪಿಸಿಕೊಂಡಿದೆ. ಸದಾ ಕುಸ್ತಿಯನ್ನು ಇತರರಿಗೆ ಕಲಿಸುವುದು, ಇವರು ನಡೆಸುತ್ತಿದ್ದ ಗರಡಿ ಮನೆಗಳ ಪ್ರಮುಖ ಕೆಲಸವಾಗಿತ್ತು. ಈ ಜನಾಂಗದ ಗೋವಿಂದ ಜೆಟ್ಟಿಯು ಮಲ್ಲಯುದ್ಧ ಮತ್ತು ವಜ್ರಮುಷ್ಟಿ ಕಾಳಗದ ಸಮರ ಕಲೆಯ ವಿಶೇಷತೆಯನ್ನು ತೋರಿಸಿ ಮೆಚ್ಚುಗೆ ಮತ್ತು ಮನ್ನಣೆಯನ್ನು ಪಡೆದಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಂದ ಮೈಸೂರಿನ ಬಳಿಯಲ್ಲಿ ಗ್ರಾಮ ಒಂದನ್ನೇ ಬಳುವಳಿಯಾಗಿ ಪಡಿದಿದ್ದರು. ಆ ಗ್ರಾಮಕ್ಕೆ ಜೆಟ್ಟಿ ಹುಂಡಿ ಎಂದು ನಾಮಕರಣವನ್ನು ಮಾಡಿದ ಇತಿಹಾಸವೂ ಇದೆ. ಆದರೆ ಸಮರ ಕಲೆಯ ವಿಶಿಷ್ಟ ಪ್ರಕಾರವಾದ ವಜ್ರಮುಷ್ಟಿ ಕಾಳಗವನ್ನು ತಮ್ಮ ಜನಾಂಗದ ಅಂದರೆ ಜೆಟ್ಟಿ ಜನಾಂಗದವರಿಗೆ ಮಾತ್ರ ಕಲಿಸಲಾಗುತ್ತಿತ್ತು.

ಮೈಸೂರು ಅರಸರು ಈ ವಿಶಿಷ್ಟ ಬಗೆಯ ಕಲೆಗೆ ಪ್ರೋತ್ಸಾಹವನ್ನು ನೀಡಿದ್ದರು. ಅರಮನೆಯ ಮುಂದೆ ನಿಲ್ಲಿಸಿದ್ದ ಕಾಳಗಕ್ಕೆ ಸಜ್ಜಾಗಿ ನಿಂತಿರುವ ಜೆಟ್ಟಿಗಳ ಕಂಚಿನ ಪ್ರತಿಕೃತಿಗಳೇ ಅರಸು ಮನೆತನದ ಜೆಟ್ಟಿ ಜನಾಂಗವನ್ನು ಮತ್ತು ಈ ಕಾಳಗವನ್ನು ನಡೆಸಿಕೊಂಡ ರೀತಿಗೆ ಸಾಕ್ಷಿಯಾಗಿದೆ. ಆದರೆ ಈಗ ಆ ಪ್ರತಿಕೃತಿಗಳು ಅಲ್ಲಿಂದ ತೆಗೆದು ಪ್ರಾಚ್ಯ ವಸ್ತುಸಂಗ್ರಾಹಾಲಯದಲಿ ಇಡಲಾಗಿದೆ. ದಸರಾ ಉತ್ಸವದ ಒಂಬತ್ತು ದಿನಗಳ ಕಾಲವೂ ಸದಾ ಕುಸ್ತಿಗಳು ನಡೆಯುತ್ತಿದ್ದರು. ಈ ಕುಸ್ತಿಗಳ ವೀಕ್ಷಣೆ ಸಾರ್ವಜನಿಕರಿಗೆ ಲಭ್ಯವಿತ್ತು. ಜೆಟ್ಟಿಗಳು ಈ ಕುಸ್ತಿಯಲ್ಲಿ ಪಾಲ್ಗೊಳ್ಳುತ್ತಿದ್ದರು. ಹೀಗಾಗಿ ಜೆಟ್ಟ ಸಮುದಾಯದ ಜೊತೆಗೆ ಈ ಕಾಳಗವೂ ಅಭಿವೃದ್ಧಿ ಹೊಂದಿತು.